**ದಿನಾಂಕ 30.05.2019 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಸ್‌ಎಸ್‌ಬಿ ವಕೀಲರಿಂದಃ-**

ನನ್ನ ತಂದೆಯ ತಂದೆ ಹೆಸರು ಗುಪ್ಪನಿಂಗಯ್ಯ. ಆತನಿಗೆ ಎರಡು ಗಂಡು ಎರಡು ಹೆಣ್ಣುಮಕ್ಕಳು. ನನ್ನ ತಂದೆ ಹಾಗೂ 1ನೇ ಪ್ರತಿವಾದಿ ಸದರಿ ಗಂಡು ಮಕ್ಕಳು ಎಂದರೆ ಸರಿ. ಸದರಿ ಹೆಣ್ಣುಮಕ್ಕಳ ಹೆಸರು ರಾಚಮ್ಮ ಹಾಗೂ ಕೆಂಪಮ್ಮ. ಅವರುಗಳು ಈಗ ಮೃತಪಟ್ಟಿರುತ್ತಾರೆ. ಅವರ ವಾರಸುದಾರರು ಇರುತ್ತಾರೆಂದರೆ ಸರಿ. ಅವರುಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನಾವು ವಾಸ ಮಾಡುತ್ತಿರುವ ಮನೆ, ಸರ್ವೆ ನಂ. 376/ಸಿ ರಲ್ಲಿ ಇಪ್ಪತ್ತೆರಡೂವರೆ ಸೆಂಟು ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ನನ್ನ ತಾತನಿಗೆ ಯಾವುದೇ ಪಿತ್ರಾರ್ಜಿತ ಸ್ವತ್ತು ಇರಲಿಲ್ಲ, ನನ್ನ ತಂದೆ ಹಾಗೂ 1ನೇ ಪ್ರತಿವಾದಿ ಸುಮಾರು 40 – 50 ವರ್ಷಗಳಿಂದ ಬೇರೆ ಬೇರೆ ವಾಸಿಸುತ್ತಿರುತ್ತಾರೆಂದರೆ ಸರಿ. ಅವರು ಎಲ್ಲಾ ವ್ಯವಹಾರಗಳನ್ನು ಪ್ರತ್ಯೇಕವಾಗಿ ಮಾಡುತ್ತಿದ್ದರು ಎಂದರೆ ಸರಿ. ನಮ್ಮ ಹಾಗೂ ಪ್ರತಿವಾದಿಯರ ವಿವರಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲು ನಿಪಿ-1ನ್ನು ದಾಖಲೆ ಬರೆಸಿರುತ್ತೇನೆಂದರೆ ಸರಿ. ನಿಪಿ-1 ಬರೆಯುವ ಪೂರ್ವದಲ್ಲಿ ನಾವು ಪ್ರತಿವಾದಿಯರ ಒಪ್ಪಿಗೆ ಪಡೆದಿಲ್ಲ ಎಂದರೆ ಸರಿ. ದಾವಾ ಸ್ವತ್ತನ್ನು 1ನೇ ಪ್ರತಿವಾದಿ ಭೂನ್ಯಾಯ ಮಂಡಳಿಯಿಂದ ಪಡೆದುಕೊಂಡಿರುತ್ತಾರೆಂದರೆ ಸರಿ. ದಾವಾ ಸ್ವತ್ತು ಆತನ ಸ್ವಯಾರ್ಜಿತ ಸ್ವತ್ತು ಎಂದರೆ ಸಾಕ್ಷಿ ಸದರಿ ಸ್ವತ್ತನ್ನು ನನ್ನ ತಾತನ ಕಾಲದಿಂದಲೂ ಸಾಗುವಳಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನಿಪಿ-21 ರಲ್ಲಿನ ಸಹಿ 1ನೇ ಪ್ರತಿವಾದಿಯದ್ದಲ್ಲ ಎಂದರೆ ನನಗೆ ತಿಳಿದಿಲ್ಲ, ನಿಪಿ-21ನ್ನು ಯಾವ ದಿನಾಂಕ ಬರೆಯಲಾಗಿದೆ ಎಂದು ನಮೂದಿಸಿಲ್ಲ ಹಾಗೂ ಅದರಲ್ಲಿನ ಸಹಿಯನ್ನು ಯಾರು ಗುರುತಿಸಿಲ್ಲ ಎಂದರೆ ನನಗೆ ತಿಳಿದಿಲ್ಲ, ನಿಪಿ-21ನ್ನು ಈ ದಾವೆಗಾಗಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ, ದಾವಾ ಸ್ವತ್ತಿನ ಕಂದಾಯ ದಾಖಲೆಗಳು 1ನೇ ಪ್ರತಿವಾದಿ ಹೆಸರಿಗೆ ಇರುತ್ತವೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಯರೇ ಸಂಪೂರ್ಣ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ, ದಾವಾ ಸ್ವತ್ತಿನಲ್ಲಿ ನಮಗೆ

ಯಾವುದೇ ಪಾಲು ಇಲ್ಲ ಎಂದರೆ ಸರಿಯಲ್ಲ. ನಿಪಿ22 ರಿಂದ ನಿಪಿ-24ನ್ನು ಈ ದಾವೆಗಾಗಿ ಸೃಷ್ಟಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಕಬಳಿಸಲು ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)*

ಓ ಹೇ ಕೇ ಸ ಇದೆ,

(ಟಿ. ಶ್ರೀಕಾಂತ್)
ಪ್ರಧಾನ ಸಿವಿಲ್‌ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ಕೊಳ್ಳೇಗಾಲ.